ಶ್ರೀಮತಿ ರಾಣಿ ಸತೀಶ್: ಮಾನ್ಯ ಸದಸ್ಯರು ಗ್ರಾಮೀಣ ಪ್ರದೇಶದಲ್ಲಿರತಕ್ಕಂಥ ಕಲೆಗಳ ಬಗ್ಗೆ ಬಹಳ ಕಾಳಜಿ ವ್ಯಕ್ತಪಡಿಸಿದರು. ಈ ಕಾಳಜಿ ಸರ್ಕಾರಕ್ಕೂ ಕೂಡ ಇದೆ. ಗ್ರಾಮೀಣ ಪ್ರದೇಶದಲ್ಲಿ ಪೌರಾಣಿಕ ನಾಟಕಗಳ ಪ್ರದರ್ಶನಕ್ಕೆ ಹಣವನ್ನು ಸಹಾಯ ಮಾಡುವ ನಿಟ್ಟಿನಲ್ಲಿ ಸರ್ಕಾರ ಈಗಾಗಲೇ ಹಲವಾರು ಕಾರ್ಯಕ್ರಮಗಳನ್ನು ಕೈಗೊಂಡಿದೆ. ಇದನ್ನು ಸಂಸ್ಕೃತಿ ನೀತಿಯಲ್ಲಿ ಒಳಪಡಿಸುವ ನಿಟ್ಟಿನಲ್ಲಿ ಸರ್ಕಾರ ಪರಿಶೀಲಿಸಿ ಕಾರ್ಯರೂಪಕ್ಕೆ ತರತಕ್ಕಂಥ ಪ್ರಯತ್ನವೂ ಇದೆ. ಕಲಾವಿದರಿಗೆ ಮಾಸಾಶನ ಕೊಡುವ ನಿಟ್ಟಿನಲ್ಲಿ ಪೌರಾಣಿಕ ನಾಟಕಗಳ ಕಲಾವಿದರಿಗೂ ಈ ಸೌಲಭ್ಯ ಕೊಡಬೇಕು ಎನ್ನುವ ಬಗ್ಗೆ ಮಾನ್ಯ ಸದಸ್ಯರು ಏನು ಕಾಳಜಿ ವ್ಯಕ್ತ ಮಾಡಿದ್ದಾರೆ, ಈ ಒಂದು ಸಮಿತಿಯಲ್ಲಿ ಬರತಕ್ಕಂಥ ನಡವಳಿಕೆಗಳಲ್ಲಿ ಈ ಅರ್ಜಿಗಳನ್ನು ಪರಿಗಣಿಸಿ, ಗ್ರಾಮೀಣ ಪ್ರದೇಶಗಳಲ್ಲಿರತಕ್ಕಂಥ, ಪೌರಾಣಿಕ ನಾಟಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಸರ್ಕಾರ ಖಂಡಿತ ಮಾನ್ಯತೆ ಕೊಡುತ್ತದೆ.

ಮಾಲಿನ್ಯ ನಿಯಂತ್ರಣ ಮಂಡಳಿ ಪರಿವೀಕ್ಷಣೆ ಮಾಡಿದ ಕಾರ್ಖಾನೆಗಳು

224 (1998) ಶ್ರೀ.ಕೆ.ಎನ್.ಸುಬ್ಬಾರೆಡ್ಡಿ (ಬಸವನಗುಡಿ):: ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ?

ಅ) ಕಳೆದ ಎರಡು ವರ್ಷಗಳಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಪರಿವೀಕ್ಷಣೆ ಮಾಡಿದ ಕಾರ್ಖಾನೆಗಳ ಸಂಖ್ಯೆ ಎಷ್ಟು; (ಪಟ್ಟಿ ಒದಗಿಸಿ)

ಆ) ಮಾಲಿನ್ಯ ಸೂಸುತ್ತಿರುವ ಕಾರ್ಖಾನೆಗಳ ವಿರುದ್ಧ ಮಂಡಳಿಯು ಕೈಗೊಂಡ ಕ್ರಮಗಳೇನು;

ಶ್ರೀ ಕೆ.ಎಚ್.ರಂಗನಾಥ್ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ 1998-99ರಲ್ಲಿ ಪರಿವೀಕ್ಷಣೆ ನಡೆಸಲಾದ ಕಾರ್ಖಾನೆಗಳ ವಿವರ ಕೆಳಕಂಡಂತಿವೆ.

ಬೃಹತ್ - 1617

ಮಧ್ಯಮ - 1113

ಸಣ್ಣ - 6445

ಹಾಗೂ 1999-2000ರಲ್ಲಿ ಪರಿವೀಕ್ಷಣೆ ನಡೆಸಲಾದ ಕಾರ್ಖಾನೆಗಳ ವಿವರ ಕೆಳಕಂಡಂತಿದೆ.

ಬೃಹತ್ - 1945

ಮಧ್ಯಮ - 1428

ಸಣ್ಣ - 8605

ಆ) ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗಾರಿಕೆಗಳಿಗೆ ಜಲ ಮತ್ತು ವಾಯು ಮಾಲಿನ್ಯಕಾರಕಗಳ ವಿಸರ್ಜನೆಯ ಗುಣಮಟ್ಟವನ್ನು ನಿಗದಿಪಡಿಸಿ ಪರಿಸರ ಮಾಲಿನ್ಯವನ್ನು ತಡೆಗಟ್ಟುತ್ತಿದೆ. ಮಂಡಳಿಯು ವಿಧಿಸಿದ ನಿಬಂಧನೆಗಳನ್ನು ಹಾಗೂ ಗುಣಮಾನಕಗಳನ್ನು ಪಾಲಿಸದೇ

ಇದ್ದ ಉದ್ದಿಮೆಗಳು, ತಪ್ಪಿತಸ್ಥ ಉದ್ಯಮಗಳು ಮತ್ತು ಆಕಸ್ಮಿಕವಾಗಿ ಜಲ ಹಾಗೂ ವಾಯು ಮಾಲಿನ್ಯ ಮಾಡಿದ ಉದ್ದಿಮೆಗಳಿಗೆ ಕಾರಣ ಕೇಳುವ ನೋಟೀಸು, ನಿಷೇಧಾಜ್ಞೆ, ಕ್ರಿಮಿನಲ್ ಕೇಸುಗಳನ್ನು ಹೂಡುವ ಕ್ರಮಗಳನ್ನು ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಕೈಗೊಂಡಿದೆ. ಕೆಲವು ಸಂದರ್ಭಗಳಲ್ಲಿ ಕಾರ್ಖಾನೆಗಳನ್ನು ಮುಚ್ಚಲು ಆದೇಶ ಮತ್ತು ಕಾರ್ಯಾಚರಣೆ ತಡೆಗೆ ಸಹ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯು ಆದೇಶ ನೀಡಿರುತ್ತದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಬೆಂಗಳೂರಿನಲ್ಲಿ ಎಷ್ಟು ಬೃಹತ್ ಕಾರ್ಖಾನೆಗಳ ಪರಿವೀಕ್ಷಣೆ ಮಾಡಿದ್ದೀರಿ? ಮೈಸೂರಿನಲ್ಲಿ ಎಷ್ಟು ಕಾರ್ಖಾನೆಗಳ ಪರಿವೀಕ್ಷಣೆ ಮಾಡಿದ್ದೀರಿ? ಎಷ್ಟು ಮೊಕದ್ದಮೆಗಳನ್ನು ಇದರ ಬಗ್ಗೆ ಹಾಕಿದ್ದೀರಿ? ಈ ಮಾಹಿತಿ ನೀಡಬೇಕೆಂದು ತಮ್ಮಲ್ಲಿ ಪ್ರಾರ್ಥನೆ.

ಶ್ರೀ ಕೆ.ಹೆಚ್.ರಂಗನಾಥ್: ಮೊಕದ್ದಮೆ ಹಾಕಿರುವ ಕೇಸಿನ ದಾಖಲೆ ಸಧ್ಯಕ್ಕೆ ನನ್ನಲ್ಲಿ ಇಲ್ಲ, ನಂತರ ಮಾನ್ಯ ಸದಸ್ಯರಿಗೆ ಒದಗಿಸಲಾಗುವುದು. ಕಾರಣ ಏನೆಂದರೆ, ಮಾನ್ಯ ಸದಸ್ಯರು ಕೇಳಿರುವ ಪ್ರಶ್ನೆಯಲ್ಲಿ, ಈ ಪ್ರಶ್ನೆ ಉದ್ಭವಿಸದೇ ಇರುವುದರಿಂದ ಇದಕ್ಕೆ ನಾನು ಮಾಹಿತಿಯನ್ನು ತರಿಸಿಕೊಂಡಿಲ್ಲ. ನಾನು ನಂತರ ನಿಮಗೆ ಬರೆದು ತಿಳಿಸುತ್ತೇನೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಇದರ ಬಗ್ಗೆ ಕ್ರಿಮಿನಲ್ ಕೇಸ್ ಕೂಡ ಹಾಕಿದ್ದೇವೆಂದು ಹೇಳಿರುವುದರಿಂದ. ಈ ತರಹ ಎಷ್ಟು ಕೇಸ್ ಹಾಕಿದ್ದೀರಿ ಎನ್ನುವುದನ್ನು ದಯಮಾಡಿ ಹೇಳಬೇಕು. ಈಗಾಗಲೇ ಈ ಮಾಲಿನ್ಯ ಮಂಡಳಿ ಏನು ಕಾರ್ಯಕ್ರಮ ಹಾಕಿದೆ? ಮಾನ್ಯ ಬಸವಲಿಂಗಪ್ಪನವರು ಇದ್ದಾಗ ಈ ಮಂಡಳಿಯಲ್ಲಿ ಬಹಳ ಎಫೆಕ್ಟೀವ್ ಆಗಿ ಕಾರ್ಯಕ್ರಮಗಳನ್ನು ಹಾಕಿದ್ದರು. ಮಾನ್ಯ ರಂಗನಾಥ್‌ನವರು ಬಂದಮೇಲೆ ಬೆಂಗಳೂರು ಮತ್ತು ಅನೇಕ ನಗರಗಳಲ್ಲಿ ಮಾಲಿನ್ಯ ಮಂಡಳಿಯವರು ಪರಿವೀಕ್ಷಣೆ ಮಾಡಿರುವ ಉದಾಹರಣೆ ಯಾವುದಾದರೂ ಇದೆಯೇ?

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರಿಗೆ ಈ ಬಗ್ಗೆ ಉತ್ತರ ನೀಡಲಾಗಿದ್ದು ಇದರಲ್ಲಿ 1998-99 ಹಾಗೂ 1999-2000ರಲ್ಲಿ ಪರಿವೀಕ್ಷಣೆ ನಡೆಸಲಾದ ಕಾರ್ಖಾನೆಗಳ ವಿವರಗಳ ಪಟ್ಟಿಯನ್ನು ನೀಡಲಾಗಿದೆ. ಕಾನೂನು ಏನು ಇದೆ ಆ ಕಾನೂನಿನ ಅಡಿಯಲ್ಲಿ ನಾವು ಕೆಲಸ ಮಾಡಬೇಕಾಗುತ್ತದೆ. ಅದು ಬಿಟ್ಟು ದಿವಂಗತ ಬಸವಲಿಂಗಪ್ಪನವರು ಏನು ಮಾಡಿದರು, ರಂಗನಾಥ್‌ನವರು ಏನು ಮಾಡಿದರು ಎನ್ನುವ ಪ್ರಶ್ನೆ ಇಲ್ಲಿ ಬರುವುದಿಲ್ಲ. ಪ್ರತಿದಿನ ನಾನು ಓಡಾಡುವಂತಹ ಪ್ರಶ್ನೆಯೂ ಇಲ್ಲಿ ಬರುವುದಿಲ್ಲ. ಅಧಿಕಾರಿಗಳು ಇದ್ದಾರೆ, ಕಾನೂನು ಇದೆ, ಕಾನೂನಿನ ಅಡಿಯಲ್ಲಿ ಏನು ಕೆಲಸ ಮಾಡಬೇಕೋ ಆದೇ ರೀತಿ ನಡೆಯುತ್ತಿದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಮಾಲಿನ್ಯ ಮಂಡಳಿಯವರು ಎಷ್ಟು ಜನಕ್ಕೆ ನೋಟೀಸ್ ಕಳುಹಿಸಿದ್ದಾರೆ?

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರು ನಾನು ಉತ್ತರ ಹೇಳಿದ್ದನ್ನು ಗಮನಿಸಲಿಲ್ಲವೆಂದು ನನ್ನ ಭಾವನೆ. ಅವರು ಕೇಳಿರುವ ಎಲ್ಲಾ ವಿವರಗಳನ್ನು ನಂತರ ನಾನು ತಮಗೆ ಬರೆದು ತಿಳಿಸುತ್ತೇನೆ.

ಶ್ರೀ ಆರ್.ಅಶೋಕ: ಅಲಸೂರಿನ ಲಕ್ಕೀಪುರದಲ್ಲಿರುವ ಏಸ್ ಫ್ಯಾಕ್ಟರಿ 24 ಗಂಟೆ ಕೆಲಸ ನಿರ್ವಹಿಸುತ್ತಿದ್ದು, ಇದರಿಂದಾಗಿ ಮಾಲಿನ್ಯದ ತೊಂದರೆ ಇದೆ ಎಂದು ನನ್ನ ಲೆಟರ್

ಹೆಡ್‌ನಲ್ಲಿ ನಾನೇ ಒಂದು ಪತ್ರವನ್ನು ಬಹಳ ಹಿಂದೆಯೇ ಕೊಟ್ಟಿದ್ದೆ. ಲೆಟರ್ ಕೊಟ್ಟಿದ್ದರೂ ಇದುವರೆವಿಗೂ ಏನೂ ಕ್ರಮ ಕೈಗೊಂಡಿಲ್ಲ. ಕೊನೇಪಕ್ಷ ಶಾಸಕರು ಲೆಟರ್ ಕೊಟ್ಟಂಥ ಸಂದರ್ಭದಲ್ಲಿ ಕೂಡಲೇ ಅದಕ್ಕೆ ಉತ್ತರವನ್ನು ಮಂಡಳಿಯವರು ಬರೆದರೆ ನಮಗೆ ಉಪಯೋಗವಾಗುತ್ತದೆ. ಏನು ಕ್ರಮ ತೆಗೆದುಕೊಂಡಿದ್ದಾರೆ, ಇಲ್ಲ ಎನ್ನುವ ಬಗ್ಗೆ ಅವರು ನಮಗೆ ಬರೆದರೆ ಉಪಯೋಗವಾಗುತ್ತದೆ.

ಶ್ರೀ ಕೆ.ಹೆಚ್.ರಂಗನಾಥ್: ನನಗೆ ಮಾಹಿತಿ ಕೊಟ್ಟಿದ್ದಿರಾ?

ಶ್ರೀ ಆರ್.ಅಶೋಕ: ಮಾಲಿನ್ಯ ಮಂಡಳಿಗೆ ನಾನು ಲೆಟರ್ ಕೊಟ್ಟಿದ್ದೇನೆ, ಇದುವರೆವಿಗೂ ಅಲ್ಲಿಂದ ಏನೂ ಉತ್ತರ ಬಂದಿಲ್ಲ.

ಶ್ರೀ ಕೆ.ಹೆಚ್.ರಂಗನಾಥ್: ಮಾನ್ಯ ಸದಸ್ಯರ ಪ್ರಶ್ನೆ ಸಂಖ್ಯೆ:1998ರ (ಅ), (ಆ) ಪ್ರಶ್ನೆಗಳಿಗೆ ಉತ್ತರಿಸಿದ್ದೇನೆ. ನಿಮ್ಮ ಪ್ರಶ್ನೆ ಅಲ್ಲಿ ಉದ್ಭವಿಸದೇ ಇರುವುದರಿಂದ ನಾನು ಮಾಹಿತಿ ತರಲಿಕ್ಕೆ ಆಗಿಲ್ಲ, ಆದರೂ ನೀವು ಹೇಳಿರುವುದನ್ನು ಪರಿಶೀಲಿಸುತ್ತೇನೆ.

ಶ್ರೀ ಆರ್.ಅಶೋಕ: ಶಾಸಕರಿಗೆ ಪತ್ರ ಬರೆಯುವ ಸೌಜನ್ಯ ಮಂಡಳಿಯರಿಗೆ ಇರುವುದು ಬೇಡವೆ?

ಶ್ರೀ ಕಟ್ಟಾ ಸುಬ್ರಹ್ಮಣ್ಯಂ ನಾಯ್ಡು: ಬೆಂಗಳೂರು ನಗರದಲ್ಲಿ ಸರ್ಕಾರಿ ಬಸ್‌ಗಳ ಕಾರ್ಖಾನೆ ಇದೆ. ಆ ಕಾರ್ಖಾನೆಗಳಿಂದ ಸಾಕಷ್ಟು ಹೊಗೆ ಹೊರಗೆ ಬರುತ್ತದೆ. ಇದರ ಮೇಲೆ ಸರ್ಕಾರ ಏನು ಗಮನ ಹರಿಸಿದೆ? ಈ ಬಗ್ಗೆ ಏನು ಕ್ರಮ ತೆಗೆದುಕೊಂಡಿದೆ?

ಶ್ರೀ ಕೆ.ಎಚ್.ರಂಗನಾಥ್: ಇವತ್ತಿನ ದಿವಸ ಮಾಲಿನ್ಯ ಬೃಹದಾಕಾರವಾಗಿ ಬೆಳೆಯುತ್ತಿದೆ. ಇದನ್ನು ತಡೆಗಟ್ಟುವುದಕ್ಕೆ ಎಲ್ಲಾ ಕೆಲಸ ನಡೆಯುತ್ತಿದೆ ಮತ್ತು ಇತ್ತೀಚೆಗೆ ಕಾನೂನು ಬಂದಮೇಲೆ ಸರ್ಕಾರ ಇದರ ಕಡೆಗೆ ಗಮನ ಹರಿಸುತ್ತಿದೆ. ಕೆ.ಎಸ್.ಆರ್ ಟಿ.ಸಿ. ಬಸ್‌ಗಳಿಂದ ಆಗುತ್ತಿರುವ ಮಾಲಿನ್ಯದ ಬಗ್ಗೆ ಮಾನ್ಯ ಸದಸ್ಯರಿಗೆ ಮತ್ತು ನನ್ನ ಗಮನಕ್ಕೆ ಹಾಗೂ ತಮ್ಮ ಗಮನಕ್ಕೂ ಬಂದಿರತಕ್ಕಂಥ ವಿಷಯವಾಗಿದೆ. ಇದನ್ನು ನಾವೆಲ್ಲರೂ ಪ್ರತಿ ದಿವಸ ಅನುಭವಿಸುತ್ತಿದ್ದೇವೆ. ಆದ್ದರಿಂದ, ಇದು ಬಹಳ ಸೂಕ್ಷ್ಮವಾದಂಥ ವಿಚಾರವಾಗಿದೆ. ಇವತ್ತಿನ ದಿವಸ ಎಲ್ಲಾ ಬಸ್‌ಗಳನ್ನು ನಿಲ್ಲಿಸಿಬಿಟ್ಟರೆ ನಮ್ಮ ಗತಿ ಏನು? ಅದಕ್ಕಾಗಿ ಒಂದು ದಿನಾಂಕವನ್ನು ನಿಗದಿ ಮಾಡಿ, ಆ ದಿನಾಂಕದಲ್ಲಿ ತಯಾರು ಮಾಡಿದ ವಾಹನಗಳು ಈಗ ಸರಿಯಾಗಿ ಕೆಲಸ ಮಾಡದೇ ಇದ್ದರೆ ಅಂಥವುಗಳನ್ನು ನಿಲ್ಲಿಸುವಂಥ ದಿಕ್ಕಿನಲ್ಲಿ ನಾವೇನಾದರು ಮಾಡಬೇಕಾಗುತ್ತದೆ. ಇದರ ಬಗ್ಗೆ ಸರ್ಕಾರ ಈಗಾಗಲೇ ಚಿಂತನೆ ಮಾಡುತ್ತಿದೆ. ಮಾನ್ಯ ಸದಸ್ಯರಾದಂಥ ಸುಬ್ಬಾರೆಡ್ಡಿಯವರು ಎಷ್ಟು ಕೇಸ್‌ಗಳನ್ನು ದಾಖಲು ಮಾಡಲಾಗಿದೆ ಎಂದು ಪ್ರಶ್ನೆ ಕೇಳಿದ್ದರು. ಅದಕ್ಕೆ 4 ಸಾವಿರ ಷೋಕಾಸ್ ನೋಟಿಸ್‌ನ್ನು ಮತ್ತು 240 ಕ್ರಿಮಿನಲ್ ಕೇಸ್‌ನ್ನು ಹಾಕಲಾಗಿದೆ ಎಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟ ಪಡುತ್ತೇನೆ.

ಶ್ರೀ ಎಸ್.ಸುರೇಶ್ ಕುಮಾರ್: ಮಾನ್ಯ ಸುಬ್ಬಾರೆಡ್ಡಿಯವರು ಮತ್ತು ಮಾನ್ಯ ಅಶೋಕ್‌ರವರು ಮಾತನಾಡುವಂಥ ಸಂದರ್ಭದಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿ ಎಂದು

ಯಾರೂ ಕೂಡ ಹೇಳಲಿಲ್ಲ. ಕೇವಲ ಮಾಲಿನ್ಯ ಮಂಡಳಿ ಎಂದಷ್ಟೇ ಹೇಳಿದರು. ಅದು ವಾಸ್ತವಕ್ಕೆ ಬಹಳ ಹತ್ತಿರ ಇರತಕ್ಕಂಥ ಅಂಶವಾಗಿದೆ. ಹಿಂದೆ ಕಾರ್ಯದರ್ಶಿಯಾಗಿದ್ದಂಥ ಮುತ್ತಣ್ಣನವರು ಇದರ ಬಗ್ಗೆ ಒಂದು ವರದಿಯನ್ನು ಕೊಟ್ಟಿದ್ದರು. ಅದರಲ್ಲಿ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಆಗಿರುವ ಹಗರಣಗಳಿಂದ ಇವತ್ತಿನ ದಿವಸ ಮಾಲಿನ್ಯ ಜಾಸ್ತಿಯಾಗುತ್ತಿದೆ ಎಂದು ಹೇಳಿದ್ದರು. ಆದ್ದರಿಂದ ಸರ್ಕಾರ ಇದನ್ನು ನಿಯಂತ್ರಣ ಮಾಡುವುದಕ್ಕಾಗುತ್ತದೆಯೆ? ಇದರ ಬಗ್ಗೆ ಮಾನ್ಯ ಸಚಿವರು ದಯವಿಟ್ಟು ಈಗಲೇ ಉತ್ತರ ಕೊಡುವುದಾದರೆ ಕೊಡಲಿ ಅಥವಾ ಇದರ ಬಗ್ಗೆ ಚರ್ಚೆ ಮಾಡುವುದಕ್ಕೆ ಅರ್ಧ ಗಂಟೆ ಕಾಲಾವಕಾಶವನ್ನು ತಾವು ಮಾಡಿಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಎಚ್.ರಂಗನಾಥ್: ನಾನು ಇಲ್ಲಿ ಕುಳಿತುಕೊಂಡು ವಿಧಾನಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳನ್ನು ಓದುತ್ತಿದ್ದೆ. ಇದರಲ್ಲಿ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ನಾವು ಯಾವ ರೀತಿ ಉತ್ತರ ಕೊಡಬೇಕೆಂದು ನಿಯಮ ಇದೆ. ಆದ್ದರಿಂದ ಮಾನ್ಯ ಸದಸ್ಯರು ಕೇಳಿರತಕ್ಕಂಥ ಪ್ರಶ್ನೆಗಳಿಗೆ ಮಾತ್ರ ನಾವು ತಯಾರಾಗಿ ಬಂದು ಉತ್ತರ ಕೊಡಲು ಸಾಧ್ಯವಾಗುತ್ತದೆ. ಒಂದು ವೇಳೆ ಹೆಚ್ಚಿನ ಪ್ರಶ್ನೆ ಕೇಳಿದರೆ ಅದಕ್ಕೆ ಉತ್ತರವನ್ನು ತರಿಸಿಕೊಂಡು ಉತ್ತರ ಹೇಳಬೇಕಾಗುತ್ತದೆ.

ಶ್ರೀ ಚಂದ್ರಕಾಂತ್ ಬೆಲ್ಲದ್: ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿರತಕ್ಕಂಥ ಮಾಲಿನ್ಯವನ್ನು ತಾವು ಮೊದಲು ಹೊರಕ್ಕೆ ತನ್ನಿ ನಂತರ ಬೇರೆ ಕಡೆ ಮಾಲಿನ್ಯವನ್ನು ತಡೆಗಟ್ಟುವುದಕ್ಕೆ ಸುಲಭವಾಗುತ್ತದೆ.

ಶ್ರೀ ಎಸ್.ಸುರೇಶ್ ಕುಮಾರ್: ಈ ವಿಷಯದ ಬಗ್ಗೆ ಚರ್ಚೆ ಮಾಡುವುದಕ್ಕೋಸ್ಕರ ಅರ್ಧ ಗಂಟೆ ಕಾಲಾವಕಾಶವನ್ನು ಮಾಡಿಕೊಡಬೇಕು.

ಅಧ್ಯಕ್ಷರು: ತಾವು ಮೊದಲು ಇದರ ಬಗ್ಗೆ ನೋಟೀಸ್ ಕಳುಹಿಸಿ. ಈಗ ಇದರ ಬಗ್ಗೆ ಏನನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಕೆ.ಎಸ್.ಸುಬ್ಬಾರೆಡ್ಡಿ: ಕೆಲವು ಸಂದರ್ಭಗಳಲ್ಲಿ ಕಾರ್ಖಾನೆಗಳನ್ನು ಮುಚ್ಚಲು ಆದೇಶ ಮತ್ತು ಕಾರ್ಯಾಚರಣೆ ತಡೆಗೆ ಮಾಲಿನ್ಯ ನಿಯಂತ್ರಣ ಮಂಡಳಿಯು ಆದೇಶ ನೀಡಿರುತ್ತದೆ ಎಂದು ತಮ್ಮ ಉತ್ತರದಲ್ಲಿ ಪ್ರಸ್ತಾಪ ಮಾಡಿದ್ದೀರಿ. ಆದ್ದರಿಂದ, ಈ ಕಾರ್ಖಾನೆಗಳಿಗೆ ನೋಟೀಸ್ ಕೊಟ್ಟು ಮುಚ್ಚುವುದಕ್ಕೆ ವಿಚಾರ ಮಾಡಿದ್ದೀರಾ?

ಶ್ರೀ ಕೆ.ಎಚ್.ರಂಗನಾಥ್: ಮಾನ್ಯ ಸದಸ್ಯರು ಈ ರೀತಿಯಾದ ಪ್ರಶ್ನೆಗಳನ್ನು ಕಳುಹಿಸಿದ್ದರೆ ನಾನು ಉತ್ತರ ಕೊಡಲು ತಯಾರಾಗಿ ಬರುತ್ತಿದ್ದೆ.

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಡೈರೆಕ್ಷನ್ ಕೊಟ್ಟಿದ್ದೇವೆಂದು ಮಾನ್ಯ ಮಂತ್ರಿಗಳು ನೀಡಿರತಕ್ಕಂಥ ಉತ್ತರದಲ್ಲಿಯೇ ಇದೆ. ನಾನು ಇದನ್ನು ಬಿಟ್ಟು ಬೇರೇನು ಕೇಳುತ್ತಿಲ್ಲ. He is reading between the lines.

Sri K.H.RANGANATH: I have to read between the lines. We have to read between the lines. We can read neither above the line nor below the line. We have to read between the lines. *ಇದುವರೆಗೂ ಏನೇನು ಕ್ರಮಗಳನ್ನು ತೆಗೆದುಕೊಳ್ಳಲಾಗಿದೆ ಎಂಬ ವಿವರಗಳನ್ನು ಕಲುಹಿಸಿ ಕೊಡುತ್ತೇನೆ. ಇದರಲ್ಲಿ ಸಭೆಗೆ ತಿಳಿಸದೇ ಮುಚ್ಚಿಡುವಂಥದೇನಿಲ್ಲ.*

ಶ್ರೀ ಕೆ.ಎನ್.ಸುಬ್ಬಾರೆಡ್ಡಿ: ನಿಮ್ಮ ಉತ್ತರದಲ್ಲಿ ಕೆಲವು ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಆದೇಶ ಕೊಟ್ಟಿದ್ದೇವೆಂದು ಹೇಳಿದ್ದಾರೆ. ಆದ್ದರಿಂದ ಎಷ್ಟು ಕಾರ್ಖಾನೆಗಳನ್ನು ಮುಚ್ಚುವುದಕ್ಕೆ ಆದೇಶ ಕೊಡಲಾಗಿದೆ ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಬೇಕು. ಮಾನ್ಯ ಮಂತ್ರಿಗಳು ಇದಕ್ಕೂ ಉತ್ತರ ಕೊಡುವುದಿಲ್ಲವೆ?

ಶ್ರೀ ಸಿ.ಭೈರೇಗೌಡ: ಕೇವಲ ಕಾರ್ಖಾನೆಗಳಿಂದಲ್ಲದೆ ವಾಹನಗಳಿಂದಲೂ ಹೆಚ್ಚಾಗಿ ಪರಿಸರ ಮಾಲಿನ್ಯ ಇವತ್ತಿನ ದಿವಸ ಆಗುತ್ತಿದೆ. ಆದ್ದರಿಂದ ಯಾವುದಾದರೊಂದು ವರ್ಷವನ್ನು ನಿಗದಿ ಮಾಡಿ, ಆ ವರ್ಷದಿಂದ ತಯಾರು ಮಾಡಿರತಕ್ಕಂಥ ವಾಹನಗಳನ್ನು ರಸ್ತೆಯ ಮೇಲೆ ತರಬಾರದು ಎನ್ನತಕ್ಕಂಥ ನಿಯಮವನ್ನು ಕಡ್ಡಾಯವಾಗಿ ಮಾಡುವುದಕ್ಕೆ ಸರ್ಕಾರದ ಮುಂದೆ ಆಲೋಚನೆ ಇದೆಯೆ?

ಶ್ರೀ ಕೆ.ಎಚ್.ರಂಗನಾಥ್: ಈ ಆಲೋಚನೆ ಸರ್ಕಾರದ ಮುಂದೆ ಇದೆ. ಇದು ಸ್ವಲ್ಪ ಸೂಕ್ಷ್ಮವಾದಂಥ ವಿಚಾರವಾಗಿರುವುದರಿಂದ ಇದರ ಬಗ್ಗೆ ಸಮಗ್ರವಾಗಿ ವಿಚಾರ ಮಾಡಿ ಯೋಚನೆ ಮಾಡಿ ತೀರ್ಮಾನ ತೆಗೆದುಕೊಳ್ಳಬೇಕಾಗುತ್ತದೆ.

ಶ್ರೀ ಎ.ನಾರಾಯಣಸ್ವಾಮಿ: ಮಾಲಿನ್ಯ ಸೂಸುತ್ತಿರುವ ಕಾರ್ಖಾನೆಗಳ ವಿರುದ್ಧ ಮಂಡಳಿಯು ಕೈಗೊಂಡಿರುವ ಕ್ರಮಗಳೇನೆಂದು ಮಾನ್ಯ ಸುಬ್ಬಾರೆಡ್ಡಿಯವರು ಪ್ರಶ್ನೆಯನ್ನು ಕೇಳಿದ್ದಾರೆ. ನನ್ನ ಕ್ಷೇತ್ರದಲ್ಲಿ ಕೂಡ ಐದು ಕೈಗಾರಿಕಾ ಪ್ರದೇಶಗಳಿವೆ. ಇವುಗಳಿಂದ ಪ್ರತಿ ದಿನ ಎಷ್ಟು ಮಾಲಿನ್ಯ ಕೆಡುತ್ತಿದೆ ಎಂಬುದನ್ನು ನಾವು ನೊಡುತ್ತಿದ್ದೇವೆ. ಮಾಲಿನ್ಯದ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿ ಬಹಳ ಚಿಂತನೆ ಮಾಡಬೇಕಾಗುತ್ತದೆ. ಬಹುತೇಕ ಕಾರ್ಖಾನೆಗಳು ತಮ್ಮಲ್ಲಿ ಉತ್ಪಾದನೆ ಆಗತಕ್ಕಂಥ ವೇಸ್ಟೇಜ್‌ನ್ನು ಹೈವೇರೋಡ್ ಪಕ್ಕದಲ್ಲಿ ಇವತ್ತಿನ ದಿವಸ ಹಾಕುತ್ತಿದ್ದಾರೆ. ಇಂಥ ಕಾರ್ಖಾನೆಗಳ ಮೇಲೆ ತಹಸೀಲ್ದಾರರು ನೋಟೀಸ್ ಕೊಟ್ಟು ಕ್ರಮ ತೆಗೆದುಕೊಳ್ಳಬಹುದೆಂದು ಹೈಕೋರ್ಟ್ ಮತ್ತು ಸರ್ಕಾರದಿಂದ ಕೂಡ ಆದೇಶ ಕೊಡಲಾಗಿದೆ. ಮಾಲಿನ್ಯ ನಿಯಂತ್ರಣ ಮಂಡಳಿಯವರು ಎನ್.ಒ.ಸಿ.ಕೊಡುವಂಥ ಸಂದರ್ಭದಲ್ಲಿ ಸದರಿ ಕಂಪನಿಗಳು ಯಾವ ರೀತಿಯಾಗಿ ಮಾಲಿನ್ಯ ನಿಯಂತ್ರಣ ಮಾಡುತ್ತವೆಂದು ಪರಿಶೀಲನೆ ಮಾಡಿ ಅವರು ಪರ್ಮಿಷನ್ ಕೊಡುತ್ತಾರೆ. ಪರ್ಮಿಷನ್ ಕೊಟ್ಟು ಕೆಲ ಕಾಲದವರೆಗೆ ಅಥವಾ ಒಂದು ವರ್ಷ, ಎರಡು ವರ್ಷಗಳ ನಂತರ ಮಾಲಿನ್ಯ ನಿಯಂತ್ರಣ ಮಂಡಳಿಯ ಅಧಿಕಾರಿಗಳು ತನಿಖೆ ಮಾಡುತ್ತಿದ್ದಾರಾ? ಇದರ ಬಗ್ಗೆ ಮಾಲಿನ್ಯ ನಿಯಂತ್ರಣ ಮಂಡಳಿಯು ಪರಿಶೀಲನೆ ಮಾಡಿ ನೋಟೀಸ್ ಕೊಟ್ಟು ಇದುವರೆಗೆ ಎಷ್ಟು ಕಾರ್ಖಾನೆಗಳನ್ನು ನಿಲ್ಲಿಸಿದ್ದೀರಿ? ಕಾಲಕಾಲಕ್ಕೆ ಕಾರ್ಖಾನೆಗಳು ಮಾಲಿನ್ಯ ನಿಯಂತ್ರಣವನ್ನು ಹೇಗೆ ಮಾಡುತ್ತಿದೆ ಎಂಬುದನ್ನು ಯಾವ ಅಧಿಕಾರಿಗಳು ಹೋಗಿ ನೋಡುವುದಕ್ಕಾಗುವುದಿಲ್ಲವೆಂದೇ ತಹಸೀಲ್ದಾರ್‌ರವರೇ ಪರಿಶೀಲನೆ ಮಾಡಿ ನೋಟೀಸ್ ಕೊಡಬಹುದೆಂದು ಸರ್ಕಾರ ಮತ್ತು

ಹೈಕೋರ್ಟ್ ಆದೇಶ ಮಾಡಿದೆ. ಈ ರೀತಿಯಾಗಿ ಆದೇಶ ಇದ್ದರೂ ಕೂಡ ಯಾವುದೇ ತಹಸೀಲ್ದಾರ್‌ರವರು ನೋಟೀಸ್ ಕೊಟ್ಟಿರುವುದಿಲ್ಲ.

ಶ್ರೀ ಕೆ.ಎಚ್.ರಂಗನಾಥ್: ನೋಟೀಸ್ ಕೊಟ್ಟಿರುವ ಬಗ್ಗೆ ಮತ್ತು ಕ್ರಿಮಿನಲ್ ಕೇಸ್ ಹಾಕಿರುವ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ಆಗಾಗ್ಗೆ ಅಧಿಕಾರಿಗಳು ಹೋಗಿ ಪರಿಶೀಲನೆ ಮಾಡಬೇಕೆಂದು ಮಾನ್ಯ ಸದಸ್ಯರ ಅಭಿಪ್ರಾಯವಾಗಿದೆ. ಬೃಹತ್ ಕೈಗಾರಿಕೆಗಳಿಗೆ ಅಧಿಕಾರಿಗಳು ಪ್ರತಿ ತಿಂಗಳು ಭೇಟಿ ನೀಡತಕ್ಕಂಥ ಪದ್ಧತಿ ಇವತ್ತು ಕೂಡ ಇದೆ. ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಅದೇನೆಂದರೆ, ಇವತ್ತಿನ ದಿವಸ ಹರಿಹರದಲ್ಲಿ ಪಾಲಿಫೈಬರ್ ಕಾರ್ಖಾನೆ ಇದೆ, ಈ ಕಾರ್ಖಾನೆಯಿಂದ ಕಲ್ಮಶವಾದ ನೀರು ತುಂಗಭದ್ರ ನದಿಗೆ ಹರಿದು ಹೋಗುತ್ತಿದೆ. ಇವತ್ತಿನ ದಿವಸ ಈ ನದಿ ನೀರಿನಿಂದ ದನಕರುಗಳ ಮೈ ತೊಳೆದರೆ ಗಾಯವಾಗತಕ್ಕಂಥ ಪರಿಸ್ಥಿತಿ ಇದೆ. ಒಂದು ಕಡೆ ಇದು ಬಹಳ ದಿವಸಗಳ ಹಿಂದೆ ಪ್ರಾರಂಭ ಮಾಡಿರತಕ್ಕಂಥ ಕಾರ್ಖಾನೆಯಾಗಿದ್ದು, ಮತ್ತೊಂದು ಕಡೆ ಇದರಿಂದ ಮಾಲಿನ್ಯ ಕೆಡುತ್ತಿದೆ. ಇವತ್ತಿನ ದಿವಸ ಈ ಎರಡು ಸಮಸ್ಯೆಗಳಿಂದ ಇದು ಕೂಡಿದೆ. ಆದ್ದರಿಂದ ಈ ಒಂದು ಕಾನೂನನ್ನು ಸಮಗ್ರವಾಗಿ ವಿಚಾರ ಮಾಡಬೇಕಾಗುತ್ತದೆ. ಇದೊಂದು ಬಹಳ ಸೂಕ್ಷ್ಮವಾದಂಥ ಸಮಸ್ಯೆಯಾಗಿದೆ. ಇದರ ಬಗ್ಗೆ ಹೈಕೋರ್ಟ್‌ನವರು ಒಂದು ಜಡ್ಜ್‌ಮೆಂಟ್‌ನ್ನು ಕೊಟ್ಟಿದ್ದಾರೆ. ಆದ್ದರಿಂದ ಹೈಕೋರ್ಟ್‌ನವರಿಗೆ ನಾವು ನಮ್ಮ ಗೌರವವನ್ನು ಸಲ್ಲಿಸೋಣ. ಒಂದೊಂದು ಸಾರಿ ಹೈಕೋರ್ಟ್‌ನವರು ನಾವು ಕಾರ್ಯಗತ ಮಾಡುವುದಕ್ಕೆ ಆಗದೇ ಇರತಕ್ಕಂಥ ಜಡ್ಜ್‌ಮೆಂಟ್ ಕೊಟ್ಟಿರತಕ್ಕಂಥದ್ದನ್ನು ನಾವು ನೋಡಿದ್ದೇವೆ. ಹೋದಸಾರಿ ನಾನು ಈ ಸದನದ ಸದಸ್ಯನಾಗಿರಲಿಲ್ಲ. ಆ ಸಂದರ್ಭದಲ್ಲಿ ಈ ವಿಚಾರ ಸದನದಲ್ಲಿ ಬಂತು. ಈಗ ಕಾವೇರಿ ನೀರನ್ನು ನೀರು ಇಲ್ಲದೇ ಇದ್ದರೂ ಬಿಡಬೇಕೆಂದು ಹೇಳಿದ್ದಾರೆ. ಆದರೆ ಬಿಡುವುದಕ್ಕೆ ಸಾಧ್ಯವಾಗುತ್ತದೆಯೆ? ಈ ರೀತಿಯಾದ ಪ್ರಶ್ನೆಗಳು ಇವತ್ತಿನ ದಿವಸ ಸಾಕಷ್ಟಿವೆ. ನಾನು ಯಾರ ಮೇಲೂ ಟೀಕೆ ಮಾಡುವುದಕ್ಕೋಸ್ಕರ ಈ ಸದನವನ್ನು ಬಳಸಿಕೊಳ್ಳುತ್ತಿಲ್ಲ. ಸರ್ಕಾರ ಇದರ ಬಗ್ಗೆ ತನ್ನ ಅಭಿಪ್ರಾಯವನ್ನು ಕೊಡುತ್ತದೆಂದು ಈ ಸದನಕ್ಕೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ. ಒಂದು ಕಡೆ ಕಾರ್ಖಾನೆಗಳು ನಮ್ಮ ರಾಜ್ಯಕ್ಕೆ ಬರಬೇಕೆಂದು ಹೇಳುತ್ತೇವೆ. ಇತ್ತೀಚೆಗೆ ಹೊಸ ಕಾರ್ಖಾನೆಗಳಿಗೆ ಪರ್ಮಿಷನ್ ಕೊಡುವಂಥ ಸಂದರ್ಭದಲ್ಲಿ ಮಾಲಿನ್ಯವನ್ನು ನಿಯಂತ್ರಣ ಮಾಡುವುದಕ್ಕೆ ಏನೇನು ಸಾಧನಗಳನ್ನು ಮಾಡಿಕೊಂಡಿದ್ದಾರೆ ಎನ್ನತಕ್ಕಂಥದನ್ನು ಪರಿಶೀಲನೆ ಮಾಡಿದ ಬಳಿಕ ಪರ್ಮಿಷನ್ ಕೊಡತಕ್ಕಂಥ ವ್ಯವಸ್ಥೆ ಇದೆ. ಕೆಲವು ಕಾರ್ಖಾನೆಗಳು ಬಹಳ ವರ್ಷಗಳ ಹಿಂದೆ ಸ್ಥಾಪನೆಯಾಗಿವೆ ಮತ್ತು ಕರ್ನಾಟಕ ರಾಜ್ಯದಲ್ಲಿ ಸುಮಾರು 20 ಸಾವಿರ ಕಾರ್ಖಾನೆಗಳು ಇವತ್ತಿನ ದಿವಸ ಅಸ್ತಿತ್ವಕ್ಕೆ ಬಂದು ಕೆಲಸ ಮಾಡುತ್ತಿವೆ. ಆದ್ದರಿಂದ ಈ ಒಂದು ಹಿನ್ನೆಲೆಯಲ್ಲಿ ಒಂದು ನಿಮಿಷದಲ್ಲಿ ಈ ವಿಚಾರಗಳ ಬಗ್ಗೆ ತೀರ್ಮಾನ ತೆಗೆದುಕೊಂಡು ಯಾರ್ಯಾರಿಗೋ ತೊಂದರೆ ಕೊಡತಕ್ಕಂಥದು ಸರಿಯಲ್ಲ. ಇವತ್ತಿನ ದಿವಸ ಬೆಂಗಳೂರು ನಗರದಲ್ಲಿ ವಿಲ್ಸನ್ ಗಾರ್ಡನ್ ಮತ್ತು ಹರಿಶ್ಚಂದ್ರ ಘಾಟ್‌ನಲ್ಲಿ ವಿದ್ಯುತ್ ಚಿತಾಗಾರ ಇದೆ. ದೇವಯ್ಯಪಾರ್ಕ್ ನಿರ್ಮಾಣ ಮಾಡಿದಂಥ ಮಾನ್ಯ ದೇವಯ್ಯ ಎಂಬುವವರು ಹರಿಶ್ಚಂದ್ರ ಘಾಟ್‌ನಲ್ಲಿ ವಿದ್ಯುತ್ ಚಿತಾಗಾರವನ್ನು ಪ್ರಾರಂಭ ಮಾಡಿದರು. ಆಗ ಇದು ಬೆಂಗಳೂರಿನ ಆಂಚಿನಲ್ಲಿತ್ತು. ಹಾಗೆಯೇ ವಿಲ್ಸನ್ ಗಾರ್ಡನ್ ವಿದ್ಯುತ್ ಚಿತಾಗಾರ

ಕೂಡ ಬೆಂಗಳೂರಿನ ಅಂಚಿನಲ್ಲಿತ್ತು. ಆದರೆ ಇವತ್ತು ಇವುಗಳು ಬೆಂಗಳೂರಿನ ಹೃದಯ ಭಾಗದಲ್ಲಿವೆ. ಆದ್ದರಿಂದ, ಇಂಥ ಕಾರ್ಖಾನೆಗಳ ಬಗ್ಗೆ ಹಾಗೂ ಸಣ್ಣಪುಟ್ಟ ಕಾರ್ಖಾನೆಗಳ ವಿಚಾರದ ಬಗ್ಗೆ ಸಮಗ್ರವಾದ ದೃಷ್ಟಿ ಇಟ್ಟುಕೊಂಡು ಯೋಚನೆ ಮಾಡಬೇಕಾಗಿದೆ. ಇವತ್ತಿನ ದಿವಸ ಈ ಪಲ್ಯುಷನ್ ಲ್ಯಕ್ಸ್‌ನ್ನು ಕೂಡ ಜಾರಿಗೆ ಕೊಡತಕ್ಕಂಥದ್ದು ಅಗತ್ಯವಿದೆ. ಪಲ್ಯುಷನ್‌ನಲ್ಲಿ ಅನೇಕ ತರಹ ಇದೆ. ನಾಯ್ಸ್‌ಪಲ್ಯುಷನ್ ಇದೆ, ಏರ್‌ಪಲ್ಯುಷನ್ ಇದೆ, ಜಲಮಾಲಿನ್ಯ ಇದೆ, ಇದೆಲ್ಲವನ್ನು ಕೂಡ ಸಮಗ್ರವಾಗಿ ವಿಚಾರ ಮಾಡಿ ತೀರ್ಮಾನ ಮಾಡತಕ್ಕಂಥ ಒಂದು ಅಭಿಪ್ರಾಯ ಇದೆ, ಈ ವಿಚಾರ ಈಗ ಸರ್ಕಾರದ ಮುಂದಿದೆ, ಇದರ ಬಗ್ಗೆ ತೀರ್ಮಾನ ತೆಗೆದುಕೊಳ್ಳುತ್ತೇವೆ. ಯಾರದೋ ಕಾರ್ಖಾನೆಯನ್ನು ಮುಚ್ಚಿದ ತಕ್ಷಣ ನಾನು ಬಹಳ ದೊಡ್ಡ ಕೆಲಸವನ್ನು ಮಾಡಿದೆ ಎಂದು ನನ್ನ ಬೆನ್ನನ್ನು ನಾನು ತಟ್ಟಿಕೊಂಡರೆ, ಅದರಿಂದ ಏನೂ ಪ್ರಯೋಜನವಾಗುವುದಿಲ್ಲ.

ಕೆಂಪಾಂಬುಧಿ ಕೆಂಪೇಗೌಡನಗರ ಕೆರೆ ಕಲುಷಿತ ಬಗ್ಗೆ

(436) **ಶ್ರೀ ಸುಬ್ಬಾರೆಡ್ಡಿ.ಕೆ.ಎಸ್. (ಬಸವನಗುಡಿ):** ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯೆಯಿಟ್ಟು ಉತ್ತರಿಸುವರೆ:

ಅ) ಬೆಂಗಳೂರು ಕೆಂಪಾಂಬುಧಿ ಕೆರೆ ಕೆಂಪೇಗೌಡನಗರ ಕೆರೆಯ ನೀರು ಕಲುಷಿತಗೊಂಡಿದ್ದು ಸುತ್ತಮುತ್ತಲಿನ ಜಾಗಗಳ ವಾತಾವರಣಕ್ಕೆ ಧಕ್ಕೆ ಉಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ;

ಆ) ಈ ಕೆರೆಗೆ ಸುತ್ತಮುತ್ತಲಿನ ಚರಂಡಿ ನೀರು ಹಾಗೂ ಮಳೆ ನೀರು ಹರಿದು ಬರುತ್ತಿರುವುದು ನಿಜವಲ್ಲವೇ ?

ಇ) ಈ ಕೆರೆಯು ಈಗ ಯಾರ ಸ್ವಾಧೀನದಲ್ಲಿದೆ;

ಈ) ಈ ಕೆರೆಯನ್ನು ಶುದ್ಧೀಕರಣ ಗೊಳಿಸುವಲ್ಲಿ ಸರ್ಕಾರ ಹಮ್ಮಿಕೊಂಡಿರುವ ಕಾರ್ಯಕ್ರಮಗಳೇನು;

ಶ್ರೀ ಕೆ.ಎಚ್.ರಂಗನಾಥ್ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

ಅ) ಹೌದು, ಬಂದಿರುತ್ತದೆ.

ಆ) ಹೌದು.

ಇ) ಸರ್ಕಾರದ ಆದೇಶ ಸಂಖ್ಯೆ:ಪಿಡಬ್ಲ್ಯುಡಿ 82 ಐಎಂಬಿ 85, ಬೆಂಗಳೂರು ದಿನಾಂಕ:11-2-88 ರ ಪ್ರಕಾರ ಈಗ ಈ ಕೆರೆಯು ಅರಣ್ಯ ಇಲಾಖೆಯ ಸ್ವಾಧೀನದಲ್ಲಿದೆ.

ಈ) ಈ ಕೆರೆಗೆ ಹರಿದು ಬರುತ್ತಿರುವ ಕೊಳಚೆ ನೀರನ್ನು ಶುದ್ಧೀಕರಿಸಿ ಕೆರೆಗೆ ಬಿಡಲು ಕೊಳಚೆ ನೀರು ಶುದ್ಧೀಕರಣ ಘಟಕ ಸ್ಥಾಪಿಸಲು ಬೆಂಗಳೂರು ನೀರು ಸರಬರಾಜು ಹಾಗೂ ಒಳಚರಂಡಿ ಮಂಡಳಿಯು ಮೆಗಾಸಿಟಿ ಪ್ರಾಜೆಕ್ಟ್ ಯೋಜನೆಯಡಿ ಕ್ರಮ ಕೈಗೊಳ್ಳುತ್ತಿದೆ.